ಮಾಡಿಕೊಂಡಿದ್ದರೆ ಇಲ್ಲಿ ಅಪ್ಲಿಕೇಷನ್ ಹಾಕಿರುವವರಿಗೆಲ್ಲಾ ಸೈಟ್‌ಗಳನ್ನು ಕೊಡಬಹುದಾಗಿತ್ತಲ್ಲ ? ಏತಕ್ಕೆ ನೀವು ಅವರ ಜೊತೆ ಶಾಮೀಲಾಗಿದ್ದೀರಿ ಎಂದು ಸ್ಪಷ್ಟವಾಗಿ ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಇವರು ಪ್ರಾಯಶಃ ಯಾರ ಜೊತೆ ಶಾಮೀಲಾಗಿ ಮಾತನಾಡುತ್ತಿದ್ದಾರೋ ಗೊತ್ತಿಲ್ಲ. ಇಲ್ಲಿ ನಾವು ಶಾಮೀಲಾಗುವ ಪ್ರಶ್ನೆ ಉದ್ಭವವಾಗುವುದಿಲ್ಲ. ಪ್ರಮಾಣಿಕತೆ ಎಂಬುದು ಯಾರೊಬ್ಬರ ಗುತ್ತಿಗೆಯೂ ಅಲ್ಲ.

(ಗೊಂದಲ)

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ

ಶ್ರೀ ಆರ್. ವೆಂಕಟರಾಮಯ್ಯ—ಶಾಮೀಲಾಗಿದ್ದಾರೆ ಎಂದು ಪುನಃ ಹೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಪ್ರಾಮಾಣಿಕತೆ ಎಂಬುದು ಯಾರೊಬ್ಬರ ಗುತ್ತಿಗೆಯೂ ಅಲ್ಲ. ಯಾರೊಬ್ಬರು ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಆಪಾದನೆ ಮಾಡುವುದಿದ್ದರೆ ನೇರವಾಗಿ ಅದರ ಬಗ್ಗೆಯೇ ಪ್ರಶ್ನೆ ಕೇಳಲಿ. ಅರ್ಧ ಘಂಟೆ ಚರ್ಚೆ ಮಾಡಲಿ, ಅದಕ್ಕೆ ಉತ್ತರ ಹೇಳುತ್ತೇವೆ. ಬೇರೆ ಯಾವುದೋ ವಿಚಾರ ಪ್ರಸ್ತಾಪ ಮಾಡಿ ಶಾಮೀಲಾಗಿದ್ದಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ತಾವು ಆ ರೀತಿ ಮಾತನಾಡಬಾರದು.

ಶ್ರೀ ಎಂ.ಪಿ. ಪ್ರಕಾಶ್,—ಸಾರ್ವಜನಿಕ ವಿಷಯದಲ್ಲಿ ಇವರಿಗೆ ವಿವರಗಳು ಬೇಕಾಗಿದ್ದರೆ ನೇರವಾಗಿ ಆ ಗೃಹ ನಿರ್ಮಾಣ ಸಹಕಾರ ಸಂಘಗಳ ವಿಷಯದಲ್ಲಿ ಪ್ರಸ್ತಾವನೆಯನ್ನು ಕಳುಹಿಸಲಿ. ಪ್ರಶ್ನೆಯನ್ನು ಕಳುಹಿಸಿಕೊಡಲಿ, ಅರ್ಧ ಘಂಟೆ ಚರ್ಚೆ ಬೇಕಾದರೆ ಮಾಡಲಿ. ತಾವು ಅದಕ್ಕೆ ಪ್ರಾವಿಜನ್ ಮಾಡಿದರೆ ನಾವು ತಯಾರಾಗಿದ್ದೇವೆ. ಇಗಕ್ಕೆ ಪೂರಕವಾದ ಪ್ರಶ್ನೆ ಕೇಳಿದರೆ ಮಾತ್ರ ಉತ್ತರ ಕೊಡುವುದಕ್ಕೆ ಆಗುತ್ತದೆ. ಪೂರಕವಲ್ಲದ ಪ್ರಶ್ನೆಗಳನ್ನು ಕೇಳಿದರೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.— ಮಾನ್ಯ ವೆಂಕಟರಾಮಯ್ಯನವರೇ, ಬೇಕಾದರೆ ಅರ್ಧ ಗಂಟೆ ಚರ್ಚೆ ಮಾಡಲಂ ಸೂಚನೆಯನ್ನು ಕಳುಹಿಸಿ.

ಶ್ರೀ ಆರ್. ವೆಂಕಟರಾಮಯ್ಯ.—ಅದು ಆಗುವುದು ಹೀಗ್ಗೆ ಹೋದ ಸೆಷನ್‌ನಲ್ಲಿ ಅರ್ಧ ಗಂಟೆ ಚರ್ಚೆಗೆ ಹಾಕಿದ್ದೆ, ಅದು ಬರಲೇ ಇಲ್ಲ. ಅರ್ಧ ಗಂಟೆ ಚರ್ಚೆಗೆ ಹಾಕಿದರೆ ಅದು ಬರುವುದಿಲ್ಲ.

ಅಧ್ಯಕ್ಷರು,—ಈಗ ಕೊಶ್ಚನ್ಸ್ ಹವರ್ ಮುಗಿಯಿತು. ಇನ್ನೂ ಎರಡು ಕೊಶ್ಚನ್ಸ್ ಇದೆ. ಜನತಾದವರದ್ದು ಒಂದು ಇದೆ, ಕ್ಯಾಂಗ್ರೆಸ್‌ನವರದ್ದು ಒಂದು ಇದೆ, ಎರಡನ್ನೂ ಲ್ಯಾಪ್ಸ್ ಮಾಡಬಹುದು. ಲ್ಯಾಪ್ಸ್ ಮಾಡಿದರೆ ನೀವು ಗಲಾಟೆ ಮಾಡುತ್ತೀರಿ. ಅವಕಾಶ ಕೊಡಲಿಲ್ಲ ಎಂದು ಗಲಾಟೆ ಮಾಡಂತ್ತೀರಿ ಇಷ್ಟು ಅವಕಾಶ ಕೊಟ್ಟರೂ ಅವಕಾಶ ಕೊಡಲಿಲ್ಲ ಎಂದು ಗಲಾಟೆ ಮಾಡುತ್ತೀರಿ. ಇನ್ನೂ ಎರಡು ಪ್ರಶ್ನೆ ಉಳಿದಿದೆ. ಅದುದರಿಂದ ದಯವಿಟ್ಟು ಯಾರು ಪ್ರಶ್ನೆ ಹಾಕಿರುತ್ತಾರೆ ಅವರು ಮಾತ್ರ ಸಪ್ಲಿಮೆಂಟರಿ ಕೇಳಬೇಕು. ಇನ್ನೂ ಎರಡು ಕೊಶ್ಚನ್ಸ್‌ಇದೆ, ಅದನ್ನು ಲ್ಯಾಪ್ಸ್ ಮಾಡುವುದಿಲ್ಲ, ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆ ಎಂದು ತಪ್ಪಾಗಿದೆ. ಅದು ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆ ಅಲ್ಲ. ಅದು ನಮ್ಮ ಯೋಜನೆ. ಅದು ಗ್ರಾಮೀಣ ಉದ್ಯೋಗ ಭರವಸೆ ಯೋಜನೆ, ಅದನ್ನು ಗ್ರಾಮೀಣ ಉದ್ಯೋಗ ಭರವಸೆ ಯೋಜನೆ ಎಂದು ತಿದ್ದಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆ

೧೮೮೪. —ಶ್ರೀ ಜ್ಞಾನವೇವ ದೊಡ್ಡ ಮೇಟಿ (ರೋಣ).—ನಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆಯ ಆಶಯದಲ್ಲಿ ರಾಜ್ಯದಲ್ಲಿ ಅಯ್ಕೆಮಾಡಿದ ತಾಲ್ಲೂಕುಗಳು ಎಷ್ಟು ? (ಜಿಲ್ಲಾವಾರು ಮಾಹಿತಿ ಒದಗಿಸುವುದು).

ಆ) ಆಯ್ಕೆ ಮಾಡುವಾಗ ಅನುಸರಿಸುವ ಕ್ರಮಗಳೇನು ? ಹಾಗೂ ಈ ಯೋಜನೆಯು ಮುಂಜೂರಾತಿಯ ನೀತಿ ನಿಯಮಗಳೇನು ?

ಇ) ಇತರೇ ತಾಲ್ಲೂಕುಗಳಿಗೆ ಸದರಿ ಯೋಜನೆಯನ್ನು ವಿಸ್ತರಿಸುವ ಯೋಜನೆ ಏನಾದರೂ ಸರ್ಕಾರಕ್ಕೆ ಇದೆಯೆ ?

ಈ) ಹಾಗಿದ್ದಲ್ಲಿ ರೋಣ ತಾ. ಅಭಿವೃದ್ಧಿಗೊಳ್ಳಬೇಕಾದ ತಾಲ್ಲೂಕೆಂದು ಪರಿಗಣಿ ಅಧ್ಯತೆಯ ಮೇರೆಗೆ ಯೋಜನೆಗೆ ಆಳವಡಿಸಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಿಣಾಭಿವೃದ್ಧಿ ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು).—

ಆ) ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಆಯ್ಕೆ ಮಾಡಿದ ತಾಲ್ಲೂಕುಗಳು ಒಟ್ಟು ೬ ಅವುಗಳೆಂದರೆ

ಜಿಲ್ಲೆ		ತಾಲ್ಲೂಕು
೧) ಮೈಸೂರು	...	ಗುಂಡ್ಲುಪೇಟೆ
೨) ಶಿವಮೊಗ್ಗ	...	ಚನ್ನಗಿರಿ
೩) ಚಿತ್ರದುರ್ಗ	...	ಚಳ್ಳಕೆರೆ
೪) ಬೆಳಗಾಂ	...	ಚಿಕ್ಕೋಡಿ
೫) ರಾಯಚೂರು	...	ಯಲಬುರ್ಗಾ
೬) ಉತ್ತರ ಕನ್ನಡ	..	ಮುಂಡಗೋಡು

ಆ) ಆಯ್ಕೆ ಮಾಡುವಾಗ ಈ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ.

೧) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನ ಸಂಖ್ಯೆಯ ಶೇಕಡವಾರು.

೨) ಮೇಲಿಂದ ಮೇಲೆ ಬರುವ ಬರಗಾಲ

೩) ಒಟ್ಟು ದುಡಿಯುವ ಕಾರ್ಮಿಕರಲ್ಲಿ ಭೂ ರಹಿತ ಕೂಲಿಕಾರರ ಪ್ರಮಾಣ.

೪) ಒಣ ಭೂಮಿ ಬೇಸಾಯ

ಈ ಯೋಜನೆಯ ಮುಂಜೂರಾತಿ ನೀತಿ ನಿಯಮಗಳೇನೆಂದರೆ ರಾಜ್ಯದಲ್ಲಿಯ ಗ್ರಾಮೀಣ ಭೂರಹಿತ ಕೃಷಿ ಕಾರ್ಮಿಕರಿಗೆ ಉದ್ಯೋಗ ನೀಡುವುದು ಹಾಗೂ ಬಾಳಿಕೆ ಬರುವ ಆಸ್ತಿಗಳನ್ನು ನಿರ್ಮಿಸುವುದೇ ಈ ಯೋಜನೆಯ ಗುರಿ.

ಇ) ಸರ್ಕಾರದ ಸಂಪನ್ಮೂಲ ಹಾಗೂ ಇತರೇ ಅಂಶಗಳನ್ನು ಅನುಲಕ್ಷಿಸಿ ಇತರೇ ತಾಲ್ಲೂಕುಗಳಿಗೆ ಸದರಿ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಪರಿಶೀಲಿಸಲಾಗುವುದು,

ಈ) ಗ್ರಾಮೀಣ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ರೋಣ ತಾಲ್ಲೂಕನ್ನು ಆಳವಡಿಸಲು ಸಂಪನ್ಮೂಲವನ್ನು ಅನುಲಕ್ಷಿಸಿ ಪರಿಶೀಲಿಸಲಾಗುವುದು.

ಶ್ರೀ ಎಸ್. ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಈಗ ಈ ಯೋಜನೆಗೆ ಏನು ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡಿದ್ದೀರಿ, ಆ ತಾಲ್ಲೂಕುಗಳಲ್ಲಿ ಈ ಯೋಜನೆಯ ಕಾರ್ಯಾಚರಣೆ ಎಷ್ಟು ವರ್ಷಗಳ ಮಟ್ಟಿಗೆ ಇದೆ, ಇದು ಎಷ್ಟು ವರ್ಷ ನಡೆಯುತ್ತದೆ ಎಂಬುದನ್ನು ತಿಳಿಸಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ನಾವು ಇಷ್ಟು ವರ್ಷವೇ ಕಾರ್ಯಾಚರಣೆ ಮಾಡುತ್ತೇವೆ ಎಂದು ನಿಗದಿ ಮಾಡಿಲ್ಲ. ಹಂತಹಂತವಾಗಿ ರಾಜ್ಯದ ಎಲ್ಲಾ, ತಾಲ್ಲೂಕುಗಳಿಗೂ ಈ ಒಂದು ಯೋಜನೆಯನ್ನು ವಿಸ್ತರಿಸಬೇಕೆಂದು ಇರುತ್ತು ಈ ಯೋಜನೆಗೆ ಸಂಪನ್ಮೂಲ ಸಿಕ್ಕಿದ ಹಾಗೆಲ್ಲಾ

ಇದನ್ನು ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಇದು ಎಸೆನ್ಷಿಯಲ್ ಫೋರ್ಸಾಂ ಆಗಬೇಕಾದರೆ, ಇದು ಎಲ್ಲಾ ಕಡೆ ಜಾರಿಗೆ ಬರಬೇಕು. ಇದಕ್ಕೆ ಸಾಕಷ್ಟು ಹಣ ಬೇಕಾಗುತ್ತದೆ. ನಮ್ಮ ಪಕ್ಷದ ಹಾಗೂ ಸರಕಾರದ ಉದ್ದೇಶ ಏನೆಂದರೆ ಶಾಸನಬದ್ಧವಾಗಿ ಇದು ಆಗಬೇಕೆಂದು ಇದೆ. ಹಳ್ಳಿಗಾಡಿನ ದಂಡಿಯುವ ಜನಕ್ಕೆ ಉದ್ಯೋಗ ಕೊಡಬೇಕೆಂದು ಆಸೆ ಇರುತ್ತದೆ. ಪ್ರಾಯೋಗಿಕವಾಗಿ ನಾವು ಇದನ್ನು ಮಾಡುತ್ತಿದ್ದೇವೆ. ಪ್ರಾಯೋಗಿಕವಾಗಿ ನಾಲ್ಕಾರು ಜಿಲ್ಲೆಗಳಿಗೆ ವಿಸ್ತರಿಸಿ ಆಮೇಲೆ ಸಂಪನ್ಮೂಲಗಳು ಸಿಕ್ಕಿದಾಗ ಇನ್ನುಳಿದ ಜಿಲ್ಲೆಗಳಿಗೆ ವಿಸ್ತರಿಸಿ ಶಾಸನಬದ್ಧವಾಗಿ ಕೊಡಬೇಕೆನ್ನುವುದು ನಮ್ಮ ಉದ್ದೇಶ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳ ಹಂಚಿಕೆ ಬಗ್ಗೆ.

೬೨೮. ಶ್ರೀ ಡಿ.ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಬೆಂಗಳೂರು ಅಭಿವೃದ್ಧಿ, ವಾರ್ತಾ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರ ?

ಅ) ೧೯೮೩ನೇ ಪೂರ್ಚಿಯಿಂದ ಇಲ್ಲಿಯವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹಂಚಿಕೆ ಮಾಡಿರುವ ನಿವೇಶನಗಳೆಷ್ಟು ? (ಸಾರ್ವಜನಿಕರು, ಹರಿಜನ, ಗಿರಿಜನರು, ಸರ್ಕಾರಿ ನೌಕರರು ಹಾಗೂ ಇನ್ನಿತರ ವರ್ಗಗಳ ಬಗ್ಗೆ ಪ್ರತ್ಯೇಕ ಅಂಕಿಅಂಶಗಳನ್ನು ಒದಗಿಸಬೇಕಾಗಿ ವಿನಂತಿ.

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಇದುವರೆಗೆ ಶಾಸಕರ ಗೃಹ ನಿರ್ಮಾಣ ಸಂಘಕ್ಕೆ ನೀಡಿರುವ ನಿವೇಶನಗಳೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ಬೆಂಗಳೂರು ಅಭಿವೃದ್ಧಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ಒಟ್ಟು ೨೩.೯೩೦ ನಿವೇಶನಗಳನ್ನು ಹಂಚಿಕೆ ಮಾಡಿದ್ದು, (ಪ್ರವರ್ಗವಾರು ಅಂಕಿ ಅಂಶಗಳ ಪಟ್ಟಿಯನ್ನು ಲಗತ್ತಿಸಿದೆ).

ಆ) ಶಾಸಕರ ಗೃಹ ನಿರ್ಮಾಣ ಸಂಘಕ್ಕೆ ೧೯೮೧ರಲ್ಲಿ ಆರ್.ಟಿ. ನಗರ ಬಡಾವಣೆಯಲ್ಲಿ ೧೦೦ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.